**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ನ್ಯಾಯಾಲಯ, ಕೆ.ಆರ್.ನಗರ**

ಸಿಸಿ.**ನಂ.** 710/2018 **ಡಿ.ಡಬ್ಲ್ಯೂ** 1

| | |
|---|---|
| ಸಾಕ್ಷಿಯ ಹೆಸರು | ಕಿರಣ್ |
| ತಂದೆಯ ಹೆಸರು | ಸುರೇಶ್ |
| ವಯಸ್ಸು | 35 ವರ್ಷ |
| ಉದ್ಯೋಗ | ಶಿಕ್ಷಕರು ಜ್ಞಾನೋದಯ ಪಬ್ಲೀಕ್ ಶಾಲೆ |
| ವಾಸ ಸ್ಥಳ | ಮೈಸೂರು |

ದಿನಾಂಕಃ 14-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ** ಆರೋಪಿ ಪರ ವಕೀಲರಿಂದಃ

1) ದೂರುದಾರರು ನನಗೆ ಪರಿಚಯ ಇರುವುದಿಲ್ಲ. ನನ್ನ ಮತ್ತು ದೂರುದಾರರ ನಡುವೆ ಹಣಕಾಸಿನ ವ್ಯವಹಾರ ಆಗಿರುವುದಿಲ್ಲ. ನಾನು ಜವರೇಗೌಡ ರವರ ಮಗ ಕಾರ್ತಿಕ್ ರವರ ಬಳಿ 2015 ನೇ ಸಾಲಿನಲ್ಲಿ 1 ದ್ವಿಚಕ್ರ ವಾಹನ ಖರೀದಿ ಮಾಡಿರುತ್ತೇನೆ. ಆ ಸಮಯದಲ್ಲಿ ರೂ. 15,000/- ಬಾಕಿ ಇದ್ದು, ಸದರಿ ಹಣದ ಭದ್ರತೆಗಾಗಿ ಸಹಿ ಮಾಡಿದ ಖಾಲಿ ಚೆಕ್ಕನ್ನು ನೀಡಿರುತ್ತೇನೆ. ಚೆಕ್ಕು ಪ್ರಕರಣ ಬಗ್ಗೆ ನನಗೆ ವಾರಂಟ್ ಬಂದು ನಂತರ ಗೊತ್ತಾಗಿರುತ್ತದೆ. ನನ್ನ ವಿಳಾಸಕ್ಕೆ ದೂರುದಾರರು ತಿಳುವಳಿಕೆ ಪತ್ರ ಕಳುಹಿಸಿರುವುದಿಲ್ಲ. ಆದ್ದರಿಂದ, ನನ್ನನ್ನು ಈ ಪ್ರಕರಣದಿಂದ ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲುಃ** ದೂರುದಾರರ ಪರ ವಕೀಲರು ಪಾಟೀ ಸವಾಲು ವಿಚಾರಣೆಗೆ ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.